ಶ್ರೀ ಜೆ. ಮಹಮ್ಮದ್ ಇಮಾಂ.—1947-48 ರಿಂದ ಇದುವರೆಗೆ ಎಷ್ಟು ಟ್ರಾಕ್ಟರುಗಳನ್ನು ಮತ್ತು ಬುಲ್ಡೋಜರುಗಳನ್ನು ಕೊಂಡುಕೊಳ್ಳಲಾಗಿದೆ ?

Dr. R. NAGAN GOWDA.—The number of tractors we had before 1947-48 was 20, in 1947-48 we purchased 46 and in 1948-49, we purchased 82 ; that makes a total of 148 and we received 6 from Bellary. About Bulldozers, we had 24 and we got one from Bellary.

ಶ್ರೀ ಜೆ. ಮಹಮ್ಮದ್ ಇಮಾಂ.—ಈ 154 ಟ್ರಾಕ್ಟರುಗಳಲ್ಲಿ 30 ಕೆಲಸ ಮಾಡುತ್ತಿವೆ. What has happened to the remaining 124 tractors ?

Dr. R. NAGAN GOWDA.—97 tractors are sick, of which 53 are at Central Tractors Works, Hebbal.

Sri J. MOHAMED IMAM.—Of these, how many are on death bed and how many are to be recovered ?

Dr. R. NAGAN GOWDA.—They are not on death bed as the Hon'ble Member mentioned. We are trying, with the spare parts that we have, to repair them. We are putting a shed on them so that they may not suffer from the devastation of weather.

Sri J. MOHAMED IMAM.—What was the total amount invested on these tractors and bulldozers ?

Dr. R. NAGAN GOWDA.—Sir, I have got the entire break up for all these tractors and bulldozers that we purchased. I can give him the details afterwards instead of taking up the precious time of the House in reading all those figures.

Sri J. MOHAMED IMAM.—Was not an agreement entered into with Fergusons & Co. Ltd. ? Was that agreement not to the effect that these repair works must be attended by them ? Was any expenditure incurred in this connection ? Is that agreement still binding ?

Dr. R. NAGAN GOWDA.—Sir, if the Hon'ble Member gives a short notice question on this, I will give him all the information.

Sri J. MOHAMED IMAM.—This is a very important matter. This may be taken up on some other day and I may be given an opportunity to put supplementaries.

Mr. SPEAKER.—This question will be taken up on some other day.

Adult Education.

Q.—10. Sri T. C. BASAPPA (Tarikere Constituency).—

Will the Government be pleased to state :—

(*a*) what is the amount granted by Government to Adult Education since last five years for each year—

(*b*) the amount spent by the Department for last five years for each year ;

(*c*) what is the amount spent under the following heads for last five years for each year ;

(i) for the Chairman and his tours ;
(ii) for the office and staff at the Headquarters ;
(iii) for the Committee meetings held ;
(iv) for the office and staff at the Divisional Offices ;
(v) for other staff ;
(vi) for Vidyapeetas ;
(vii) expenses on vans ;
(viii) grants for Libraries ;
(ix) for free supply of books and slates ;
(x) for amounts given to teachers of adult schools ;
(xi) for other expenses ?

A.—Sri A. G. RAMACHANDRA RAO (Minister for Law and Education).—

			Rs.	
(*a*)	1949-50	...	5,00,000	
	1950-51	...	5,00,000	
	1951-52	...	5,00,000	
	1952-53	...	5,00,000	
	1953-54	...	5,00,000	
(*b*)	1949-50	...	3,80,000	(for 9 months)
	1950-51	...	3,69,000	
	1951-52	...	4,35,141	
	1952-53	...	4,95,404	
	1953-54	...	4,95,630	

(*c*) Please see Statement below.

(SRI A. G. RAMACHANDRA RAO.)

Amount spent for the five-years from 1949 to 1954.

Serial No.	Particulars	Amount spent				
		1949–50	1950–51	1951–52	1952–53	1953–54
	AMOUNT SPENT FOR	Rs.	Rs.	Rs.	Rs.	Rs.
(i)	(1) Chairman ...	...	...	...	...	...
	(2) and his tours ...	368	1,018	1,096	722	741
(ii)	Office and Staff at Headquarters ...	24,734	32,276	35,401	37,022	39,225
(iii)	Committee Meetings ...	2,013	1,891	2,396	3,275	3,833
(iv)	Office and staff at Divisional Offices ...	10,878	14,678	13,505	14,997	13,924
(v)	Other staff (Supervision Organisation) ...	1,09,579	1,49,492	1,43,254	1,58,042	1,65,475
(vi)	Vidyapeethas ...	19,487	30,506	41,025	53,912	61,446
(vii)	Expenses on Vans (General Education) ...	22,323	29,176	31,757	37,517	39,079
(viii)	Grants for Libraries ...	23,765	39,048	32,190	51,283	46,429
(ix)	Free supply of books and slates ...	59,535	41,572	48,876	52,542	37,357
(x)	Amounts given to teachers of Adult Schools...	80,370	1,08,282	72,566	62,500	75,009
(xi)	Other expenses ...	47,092	43,369	52,895	58,355	52,115

ಶ್ರೀ ಟಿ. ಸಿ. ಬನಪ್ಪ.—ವಯಸ್ಕರ ಶಿಕ್ಷಣ ಸಮಿತಿಯ ಚೇರ್ಮನ್ ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಶ್ರೀಪ್ರಾಮಾದಯ್ಯಗಾರ್‌ರವರು.

ಶ್ರೀ ಟಿ. ಸಿ. ಬನಪ್ಪ.—ಅವರು ಮೈಸೂರು ದೇಶದಲ್ಲಿ ವರ್ಷಕ್ಕೆ ಎಷ್ಟು ತಿಂಗಳಕಾಲ ಇರುತ್ತಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಸದಾ ಇಲ್ಲೇ ಇರುವುದು. ಪಾರ್ಲಿಮೆಂಟ್ ಕೆಲಸವಿದ್ದಾಗ ದೆಹಲಿಗೆ ಹೋಗುತ್ತಾರೆ.

ಶ್ರೀ ಟಿ. ಸಿ. ಬನಪ್ಪ.—ವರ್ಷಕ್ಕೆ ಆರು ತಿಂಗಳ ಮೇಲ್ಪಟ್ಟು ಅವರು ದೆಹಲಿಯಲ್ಲೇ ಇರುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನುಮಾರು ನಾಲ್ಕು ತಿಂಗಳ ಕಾಲ ಅಲ್ಲಿರಬಹುದು.

ಶ್ರೀ ಟಿ. ಸಿ. ಬನಪ್ಪ.—ಎಷ್ಟು ವರ್ಷದಿಂದ ಅವರು ಈ ಸಮಿತಿಯ ಚೇರ್‌ಮ್ಯಾ ಆಗಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ಗೊತ್ತಿರುವಹಾಗೆ ಮೂರುವರ್ಷಗಳಿಂದ ಇರಬಹುದು.

ಶ್ರೀ ಟಿ. ಸಿ. ಬನಪ್ಪ.—ನುಮಾರು ಆರು-ಏಳು ವರ್ಷಗಳಿಂದ ಛೇರ್‌ಮ್ಯಾ ಆಗಿದ್ದಾರೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ಟಿ. ಸಿ. ಬನಪ್ಪ.—ಕಾರ್ಯಕಾರಿ ಸಮಿತಿ ಮೀಟಿಂಗಿನಲ್ಲಿ ವರ್ಷಕ್ಕೆ ಎರಡು-ಮೂರು ಮೀಟಿಂಗುಗಳಲ್ಲಿ ಸಹ ಅವರು ಇರುವುದಿಲ್ಲ ಎಂಬುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕವಿರುವಾಗ ಹಾಜರಿರುತ್ತಾರೆ.

ಶ್ರೀ ಟಿ. ಸಿ. ಬನಪ್ಪ.—ಮೈಸೂರು ದೇಶದಲ್ಲಿ ಯಾವಾಗಲೂ ಇಲ್ಲದಿರುವುದರಿಂದ ಈ ಸಂಸ್ಥೆಯ ಅಭಿವೃದ್ಧಿಗೆ ಅವಕಾಶವಿಲ್ಲದೆ ತೊಂದರೆಯಾಗುತ್ತಿದೆಯೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಸಿ. ಬನಪ್ಪ.—ಅದರಿಂದ ಸಮಿತಿಯ ಕೆಲಸಕಾರ್ಯ ಬಹಳ ಹಿಂದೆ ಬಿದ್ದಿದೆಯೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಅಭಿಪ್ರಾಯದಲ್ಲಿ ಇದುವರೆಗೆ ಸಮರ್ಪಕವಾಗಿ ನಡೆಯುತ್ತಿದೆ.

ಶ್ರೀ ಟಿ. ಸಿ. ಬನಪ್ಪ.—1952-53 ರಲ್ಲಿ ಎಷ್ಟು ಜನ ವಿದ್ಯಾವಂತರಾಗಿದ್ದಾರೆಂದು ಹೇಳಲು ಸಾಧ್ಯವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ದಿವಸಗಳ ಕೆಳಗೆ ಈ ಸಭೆಗೆ ಅಂಕಿ ಅಂಶವನ್ನು ಕೊಟ್ಟೆ.

ಶ್ರೀ ಟಿ. ಸಿ. ಬನಪ್ಪ.—1952-53 ರಲ್ಲಿ 32,541 ಜನ ವಿದ್ಯಾವಂತರಾಗಲು 62,000 ರೂಪಾಯಿ ಖರ್ಚಾಗಿದೆ. ಅದೇ 1953-54 ರಲ್ಲಿ ಕೇವಲ 26,917 ಜನರಿಗಾಗಿ 75 ಸಾವಿರ ರೂಪಾಯಿ ಖರ್ಚಾಗುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಏಕೆ ಹಾಗಾಗಿದೆಯೆಂದು ಆ. ವಿಚಾರದಲ್ಲಿ ಸಮಜಾಯಿಷಿಯನ್ನು ಕೇಳಿದ್ದೇವೆ.

ಶ್ರೀ ಟಿ. ಸಿ. ಬನಪ್ಪ.—ಇದರಿಂದ ವಯಸ್ಕರ ಶಿಕ್ಷಣ ಸಮಿತಿಯವರು ಎಷ್ಟು ಅಗತ್ಯವೋ ಅದಕ್ಕಿಂತ ಜಾಸ್ತಿಯಾಗಿ ಖರ್ಚು ಮಾಡುತ್ತಿದ್ದಾರೆಂಬುದು ವ್ಯಕ್ತವಾಗುತ್ತಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಭಾವನೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಸಿ. ಬನಪ್ಪ.—ಅಲ್ಲಿ ಸೂಪರ್‌ವೈಸರ್‌ಗಳೂ ಮತ್ತು ಉಪಾಧ್ಯಾಯರುಗಳೂ ಸೇರಿಕೊಂಡು attendance ಮುಂತಾದ ರಿಜಿಸ್ಟರುಗಳಲ್ಲಿ ಸುಳ್ಳುಲೆಕ್ಕ ತೋರಿಸಿ ನುಮ್ಮನೆ ದೊಡ್ಡದಾಗಿ graph ತೋರಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಸಿ. ಬನಪ್ಪ.—ಆ ರೀತಿ ತಮಗೆ ಯಾವ complaint ಕೂಡ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ complaints ಬಂದಿಲ್ಲ.

ಶ್ರೀ ಟಿ. ಸಿ. ಬನಪ್ಪ.—ಈ ವಿಚಾರದಲ್ಲಿ ಇಡೀ ವಯಸ್ಕರ ಶಿಕ್ಷಣ ಸಮಿತಿಯ ಎಲ್ಲಾ ವ್ಯವಹಾರಗಳನ್ನೂ ಸರ್ಕಾರದವರೇ ಇಟ್ಟುಕೊಂಡು ಸಮಿತಿಯನ್ನು ಜಾಗ್ರತೆ ವಜಾ ಮಾಡುವುದು ಸೂಕ್ತವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಕ್ಷರ ಸಮಿತಿಯ ಕೆಲಸ ಕಾರ್ಯಗಳನ್ನೂ ವಿದ್ಯಾಪೀಠದ ಕೆಲಸ ಕಾರ್ಯಗಳನ್ನೂ ಬೇರೆ ಮಾಡಿ ಎಂದು ರಿಫಾರ್ಮ್ಸ್ ಕಮಿಟಿಯವರು ಸೂಚನೆ ಮಾಡಿದ್ದಾರೆ. ಅದು ಪರ್ಯಾಲೋಚನೆಯಲ್ಲಿದೆ.

Sri V. M. MASCARENHAS.—Under (iii) in the Appendix you have shown an expenditure of Rs. 3,833 for 1953-54 on Committee Meetings. Will you please tell me what it stands for ?

Sri A. G. RAMACHANDRA RAO.—It means travelling expenses of the Committee members and expenses of the meeting.

Sri V. M. MASCARENHAS.—Are members paid any honorarium or allowance for coming to the meeting ?

Sri A. G. RAMACHANDRA RAO.—No honorarium is paid. But T.A. and other allowances are paid.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಪರಿಶಿಷ್ಟದಲ್ಲಿ ಪುಸ್ತಕ ಮತ್ತು ಸ್ಲೇಟನ್ನು ಮುಫತ್ತಾಗಿ ಕೊಂಡು ಕೊಡುವುದಕ್ಕಾಗಿ ಖರ್ಚುಮಾಡಬೇಕೆಂದು ಒಂದು ಬಾಬು ಇದೆ. 1952-53 ರಲ್ಲಿ ಈ ಬಾಬಿನಲ್ಲಿ ಖರ್ಚಾಗಿರುವುದಕ್ಕಿಂತಲೂ 1953-54 ರಲ್ಲಿ ಖರ್ಚಾಗಿರುವುದು ಇಳಿಮುಖವಾಗಿದೆ. ವಿದ್ಯಾರ್ಥಿಗಳ ಹೆಚ್ಚಾಗಿದ್ದರೂ ಈ ಖರ್ಚು ಇಳಿಮುಖವಾಗುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲು ಒಂದೇ ವಿದ್ಯಾಪೀಠವಿತ್ತು. ಈಗ ಎರಡು ನಡೆಸುತ್ತಿದ್ದಾರೆ. ಜೊತೆಗೆ ಈಗ mobile unit ಎಂದು ಬೇರೆ ನಡೆಸುತ್ತಿದ್ದಾರೆ. ಈ ರೀತಿ ಮೂರು ಇವೆ. ಸರ್ಕಾರದವರಿಂದ ಗ್ರಾಂಟು ಬಾರದಿರುವುದರಿಂದ ಇದನ್ನು ಖೋತಾ ಮಾಡಬೇಕಾಯಿತು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮುಖ್ಯವಾಗಿ ಪುಸ್ತಕ, ಸ್ಲೇಟುಗಳಲ್ಲಿ ಖರ್ಚನ್ನು ಕಡಮೆಮಾಡಿ, ಪ್ಯಾನು, ಸಂಚಾರ ಸೌಕರ್ಯಗಳಿಗೆ ಹೆಚ್ಚು ಖರ್ಚು ಮಾಡುತ್ತಿರುವುದು ಈ ಪರಿಶಿಷ್ಟದಿಂದ ಗೊತ್ತಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.–ಗೊತ್ತಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈಗಿರತಕ್ಕ ಚೇರ್ಮನ್ನರು ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲೇ ಹೇಳಿದ್ದೇನೆ ; ಟಿ. ಮಾದಯ್ಯಗೌಡರು.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ವ್ಯಾನುಗಳು ಈ ಇಲಾಖೆಗೆ ಕೊಡಲ್ಪಟ್ಟಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೂರು ಮೊಬೈಲ್ units ಗಳನ್ನು ಕೊಟ್ಟಿದೆ.

ಶ್ರೀ ಎಸ್. ಗೋಪಾಲಗೌಡ.—ಅಕ್ಷರಸ್ಥರನ್ನು ಪರೀಕ್ಷೆಮಾಡುವವರು ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೇ ಮಾಡುತ್ತಾರೆ ಮತ್ತು ಅದಕ್ಕೆಲ್ಲಾ ಸೂಪರ್‌ವೈಜರುಗಳಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಅವರು ಅಂದರೆ ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಪಾಠ ಹೇಳಿಕೊಟ್ಟವರು ; ಅವರ ಮೇಲೆ ಸೂಪರ್‌ವೈಜರ್‌ಗಳಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಪಾಠ ಹೇಳಿಕೊಡುವುದಕ್ಕೆ ಬೇರೆ ಸಿಬ್ಬಂದಿಯನ್ನು ಸರ್ಕಾರದವರು ನೇಮಿಸಿದ್ದಾರೆಯೇ ಅಥವಾ ಈಗಿರತಕ್ಕ ಉಪಾಧ್ಯಾಯರೇ ಮಾಡುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಉಪಾಧ್ಯಾಯರ ಸಂಖ್ಯೆಯೇ ಜಾಸ್ತಿ.

ಶ್ರೀ ಎಸ್. ಗೋಪಾಲಗೌಡ.—ಅವರಿಗೆ ವೇತನ ಕೊಡತಕ್ಕ ರೀತಿ ಹೇಗೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು honorarium ಕೊಡಬೇಕೆಂದು ಗೊತ್ತುಮಾಡಿದ್ದಾರೆ. ಒಬ್ಬೊಬ್ಬ ವಿದ್ಯಾರ್ಥಿಯನ್ನೂ ಅಕ್ಷರಸ್ಥನನ್ನಾಗಿ ಮಾಡುವುದಕ್ಕೆ ಒಂದಿಷ್ಟು honorarium ಕೊಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಆ ಪುಸ್ತಕಗಳನ್ನು ಮುದ್ರಿಸಲು ಬೇರೆ ಏನಾದರೂ ವ್ಯವಸ್ಥೆಮಾಡಿದ್ದೀರಾ ? ಅದರ ಖರ್ಚನ್ನು ಯಾರು ವಹಿಸುತ್ತಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಯಸ್ಕರಿಗೆ ತಕ್ಕಂಥ ಪುಸ್ತಕಗಳನ್ನು ಬರೆಸಿ ಅವರೇ print ಮಾಡಿಸುತ್ತಾರೆ.

ಶ್ರೀ ಆರ್. ಅನಂತರಾಮಣ್.—UNESCO ಅವರು ಬಂದು ನೋಡಿ ಇದನ್ನು appreciate ಮಾಡಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿದರು.

ಶ್ರೀ ಆರ್. ಅನಂತರಾಮಣ್.—ಶ್ರೀ ಮಾದಯ್ಯ ಗೌಡರು ಪಾಶ್ಚಾತ್ಯ ದೇಶಗಳಿಗೆ ಹೋಗಿ ಅನುಭವ ಪಡೆದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನುಭವವನ್ನು ಪಡೆದು ಬಂದಿದ್ದಾರೆ ; ಇಲ್ಲಿ start ಮಾಡಿರುವುದನ್ನು ನೋಡಿ ನಮಗೆ ಸಂತೋಷವಾಗಿದೆಯೆಂದು ಹೇಳಿದ್ದಾರೆ.

ಶ್ರೀ ಆರ್. ಅನಂತರಾಮಣ್.—ಸೆಕ್ರೆಟೆರಿಯವರು ಸರ್ಕಾರಿಯವರೇ ಅಥವಾ ಖಾಸಗಿಯವರೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಬ್ಬರು ಖಾಸಗಿಯ ಸೆಕ್ರೆಟೆರಿಯವರು ಕೂಡ ಇದ್ದಾರೆ.

ಶ್ರೀ ಆರ್. ಅನಂತರಾಮಣ್.—ಪ್ರಚಾರಮಾಡುವ ಕೆಲಸ ಕಾರ್ಯದರ್ಶಿಗಳ ಕೆಲಸವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಸರಿಯಾಗಿ ಗೊತ್ತಿಲ್ಲ.

ಶ್ರೀ ಎಲ್. ಸಿದ್ದಪ್ಪ.—ಪರಿಶಿಷ್ಟದಲ್ಲಿ 5 ನೆಯ ಬಾಬಿನಲ್ಲಿ "Other Staff (Supervision—organisation) ಎಂಬುದಕ್ಕೆ ಖರ್ಚುಮಾಡಿರುವುದನ್ನೂ, 10 ನೆಯ ಬಾಬಿನಲ್ಲಿ 'Amounts given to teachers of Adult High Schools" ಎಂಬುದಕ್ಕೆ ಖರ್ಚಾಗಿರುವುದನ್ನೂ ಹೋಲಿಸಿ ನೋಡಿದರೆ 1953-54 ನೆಯ ಸಾಲಿನಲ್ಲಿ ಉಪಾಧ್ಯಾಯರುಗಳಿಗಾಗಿ 75,000 ರೂಪಾಯಿಗಳು ಖರ್ಚಾಗಿದ್ದರೆ, ಸೂಪರ್‌ವೈಸರಿ ಭಾಗಕ್ಕೆ 1,65,475 ರೂಪಾಯಿ ಖರ್ಚಾಗಿರುವುದೂ, ಅದೇ ರೀತಿ ಇತರ ಬಾಬುಗಳಿಗೂ ಹೆಚ್ಚಿಗೆ ಖರ್ಚಾಗಿರುವುದು ವೇದ್ಯವಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಾಗಿದೆ.

ಶ್ರೀ ಎಲ್. ಸಿದ್ದಪ್ಪ.—ಇದು ಮೂಗಿಗಿಂತ ಮೂಗುತಿ ಭಾರವಾದಂತಿದೆಯೆಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾಪೀಠದ ಕೆಲಸ ಸೇರಿರುವುದರಿಂದ ಅದು ಜಾಸ್ತಿಯಾಗಿದೆ.

ಶ್ರೀ ಎಲ್. ಸಿದ್ದಪ್ಪ.—ವಿದ್ಯಾಪೀಠಕ್ಕೇ ಬೇರೆ ಇದೆಯಲ್ಲಾ !

ಶ್ರೀ ಎ. ಜಿ. ರಾಮಚಂದ್ರರಾವ್.—ಬೇರೆ ಇದ್ದರೂ ಕೆಲಸ ಜಾಸ್ತಿಯಾಗಿರುವುದರಿಂದ ಆ ಕೆಲಸವೂ ಇದರಲ್ಲಿ ಸೇರಿದೆ.

ಶ್ರೀ ಡಿ. ಆರ್. ಕರಿಗೌಡ.—ಚೇರ್ಮನ್ನರನ್ನು ಸರ್ಕಾರದವರು ಚುನಾವಣೆ ಮಾಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ಚುನಾವಣೆ ಮಾಡಿದ್ದಾರೆ.

ಶ್ರೀ ಡಿ. ಆರ್. ಕರಿಗೌಡ.—ಸಿಬ್ಬಂದಿಯ ಖರ್ಚು ಜಾಸ್ತಿಯಾಗಿದೆಯೆಂದರೆ, ಆ ವಿದ್ಯಾಪೀಠದಲ್ಲಿ ಏನು ಕೆಲಸಮಾಡುತ್ತಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಳ್ಳಿಗಾಡಿನಲ್ಲಿ leadership ನ್ನು ಹೇಗೆ ತಯಾರು ಮಾಡುವುದು ಮುಂತಾದುವನ್ನು ಕಲಿಸುತ್ತಾರೆ.

ಶ್ರೀ ಡಿ. ಆರ್. ಕರಿಗೌಡ.—ಕಳೆದ ಸಾಲಿನಲ್ಲಿ ಎಷ್ಟು ಜನರನ್ನು ಆ ರೀತಿ ತಯಾರು ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಪಿ. ಆರ್. ರಾಮಯ್ಯ.—"Grants for library" ಎಂದು ಇಲ್ಲಿ ತಿಳಿಸಿದೆ, library ಗಳನ್ನು ಏರ್ಪಡಿಸುವುದಕ್ಕೇನಾದರೂ Scheme ಇಟ್ಟುಕೊಂಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಟ್ಟುಕೊಂಡಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ಲೈಬ್ರರಿಗಳನ್ನು ಸ್ಥಾಪನೆಮಾಡಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರ ಅಂಕಿ ಅಂಶಗಳನ್ನು ಈ ಸೆಷನ್ನಿನಲ್ಲೇ ಹಿಂದೊಮ್ಮೆ ಹೇಳಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ಸ್ಥಳಗಳಲ್ಲಿ ಲೈಬ್ರರಿಗಳನ್ನು ಪ್ರಾರಂಭಿಸಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ಜ್ಞಾಪಕವಿರುವ ಹಾಗೆ ಹಿಂದೆಯೇ ಉತ್ತರ ಕೊಟ್ಟಿದೆ.

ಶ್ರೀ ಬಿ. ರಾಚಯ್ಯ.—ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯಬೇಕಾದರೆ ಅದನ್ನು ವಿದ್ಯಾ ಇಲಾಖೆಯ ಡೈರೆಕ್ಟರವರ ಅಡಳಿತಕ್ಕೊಳಪಡಿಸುವುದನ್ನು ಯೋಚನೆ ಮಾಡಿದ್ದಾರೆಯೇ ?

Sri A. G. RAMACHANDRA RAO.—It has been answered that it is under consideration of Government.

ಶ್ರೀ ಬಿ. ರಾಚಯ್ಯ.—ಈಗಿರತಕ್ಕ ರೀತಿಯಲ್ಲಿ ಖಾನಗೀ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ಈ ಇಲಾಖೆಯಲ್ಲಿರುವುದರಿಂದ ಕೆಲಸ ಎಷ್ಟರಮಟ್ಟಿಗೆ ನಡೆಯಬೇಕೋ ಅಷ್ಟರಮಟ್ಟಿಗೆ ನಡೆಯುತ್ತಿಲ್ಲವೆಂಬುದು ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಖಾನಗಿ ಜನರು ಪ್ರಯತ್ನಮಾಡಿ ಬೆಳೆಸಿಕೊಂಡು ಬಂದಿರುವ ಇದು ಉತ್ತೇಜಕರವಾಗಿದೆ.

ಶ್ರೀ ಬಿ. ರಾಚಯ್ಯ.—ಅವರ ಕೆಲಸಕಾರ್ಯಗಳನ್ನು ಕಡಮೆಮಾಡುವುದಕ್ಕೂ ಮತ್ತು ಜನರಿಗೆ ಹೆಚ್ಚು ಉಪಕಾರ ಮಾಡುವುದಕ್ಕೂ ಅನುಕೂಲವಾಗುವಂತೆ ಇದನ್ನು ವಿದ್ಯಾ ಇಲಾಖೆಯ ಡೈರೆಕ್ಟರವರಿಗೆ ವರ್ಗಾಯಿಸುವುದು ಸೂಕ್ತವೆಂದು ಹೇಳಬಹುದಲ್ಲವೇ?

ಅಧ್ಯಕ್ಷರು.—ಸರ್ಕಾರದವರು ಅದು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಇದರ ಆಡಳಿತದ ವಿಷಯದಲ್ಲಿ ಒಂದು ರಿಪೋರ್ಟ್ ತಯಾರುಮಾಡುವ ಬಗ್ಗೆ ಒಂದು ಕಮಿಟಿ ಮಾಡುವ ಅವಶ್ಯಕತೆಯಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಅವಶ್ಯಕತೆ ಕಂಡುಬಂದಿಲ್ಲ.

Sri Mulka GOVINDA REDDY.—Has it come to the notice of the Government that the vans of this department are used for purposes other than the purpose for which they are meant, for example, for organising Karnataka Ekikarana Meetings in Bellary District?

Sri A. G. RAMACHANDRA RAO.—It has not come to the notice of the Government.

Sri Mulka GOVINDA REDDY.—Will Government take serious notice of such instances?

Sri A. G. RAMACHANDRA RAO.—If it is brought to our notice, we will certainly examine it.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು 10ನೆಯ ಖಚಂನಲ್ಲಿ ಖರ್ಚಾಗಿರುವ 62,500 ಮತ್ತು 75,000 ರೂಪಾಯಿಗಳ ಬಗ್ಗೆ explanationನ್ನು call for ಮಾಡಿದೆಯೆಂದು ಹೇಳಿದೀರಿ. Explanationನ್ನು call for ಮಾಡಿದ ತಾರೀಖೇನು? Explanation ಏನೆಂದು ಕೇಳಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಏಕೆ ಹೀಗಾಯಿತೆಂದು ಕೇಳಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ತಾರೀಖಿನಲ್ಲಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಪ್ರಶ್ನೆ ಬಂದಮೇಲೆ, ಅವರೇ ಇಲ್ಲಿಗೆ ಬಂದಿದ್ದರು; ವಿಚಾರ ಮಾಡುತ್ತೇವೆಂದು ಹೇಳಿದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ 5 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದಕ್ಕೇನಾದರೂ Rules of Procedureನ್ನು ಗೊತ್ತುಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು Budget ತಯಾರುಮಾಡಿ ಕಳುಹಿಸುತ್ತಾರೆ. ಅದನ್ನು ಪರಿಶೀಲನೆಮಾಡಿ ಕೊಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಡ್ಜೆಟ್ಟನ್ನು ನಾನು ಕೇಳಲಲ್ಲ. ಯಾವ ಯಾವ ನಿಯಮಗಳಿಗೊಳಪಟ್ಟು ಖರ್ಚು ಮಾಡಬೇಕೆಂದು ಹೇಳಿ Rules of Procedure ಗೊತ್ತುಮಾಡಿದ್ದೀರಾ?

Sri A. G. RAMACHANDRA RAO.—There are well known rules of procedure. Estimates are prepared and sent and approved. Accordingly they go on spending.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಸ್ಟಿಮೇಟ್ ಕಳುಹಿಸುತ್ತಾರೆ, ತಾವು approve ಮಾಡುತ್ತೀರಿ ಎಂಬುದೇನೋ ಸರಿ. ಆದರೆ, Estimated grant under each head ಇರುವುದನ್ನು ಯಾರುಯಾರು ಎಷ್ಟೆಷ್ಟು ಕೊಡಬೇಕೆಂಬುದನ್ನು ನಿಗದಿಮಾಡಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿದ್ದಾರೆ; ಫೈನಾನ್ಸ್ ಇಲಾಖೆಯವರು ಮಾಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಇಲಾಖೆಯ ಅಕೌಂಟ್ಸ್‌ನ್ನು ಆಡಿಟ್ ಮಾಡುವ ವ್ಯವಸ್ಥೆಯೇನಾದರೂ ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಡಿಟ್ ಕೂಡ ಆಗುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರು ಮಾಡುತ್ತಾರೆ?

Sri A. G. RAMACHANDRA RAO.—I think some agency of the State Accounts Department.

Sri H. M. CHANNABASAPPA.—Has it come to the notice of the Government that public opinion in this matter is that the expenditure on this is a wastage of funds?

Sri A. G. RAMACHANDRA RAO.—That is one aspect of opinion. There are other aspects also.

Sri H. M. CHANNABASAPPA.—Will Government examine the merits of the two opinions?

Sri A. G. RAMACHANDRA RAO.—They feel that it is run very well.

Sri M. PALANIYAPPAN.—Has the Government got powers to remove the Chairman even though he is elected, if in their opinion the work is not successful?

Sri A. G. RAMACHANDRA RAO.—It is a hypothetical question.

Sri M. PALANIYAPPAN.—Is there a Committee for Bangalore District for adult education?

Sri A. G. RAMACHANDRA RAO.—Yes.

Sri M. PALANIYAPPAN.—How many times it has met during these years ?

Sri A. G. RAMACHANDRA RAO.—Notice.

Sri M. PALANIYAPPAN.—Has it come to the notice of Government that in spite of there being a Secretary, for more than two years, the Committee has not met even once ?

Sri A. G. RAMACHANDRA RAO.—It has not come to my notice.

Sri M. PALANIYAPPAN.—Has it come to the notice of Government that, in view of this fact, no adult work is being done in Bangalore District ?

Sri A. G. RAMACHANDRA RAO.—It has not come to the notice of the Government.

Sri M. PALANIYAPPAN.—If it is brought to your notice, what is the action you propose to take ?

Sri A. G. RAMACHANDRA RAO.—In view of the interpellation, I will get an elucidation in the matter.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈಗ ತಾವು ಇಷ್ಟು ಹಣವನ್ನು ಖರ್ಚುಮಾಡುತ್ತಿದ್ದಾಗ್ಗೂ ಒಂದು ಪರ್ಸೆಂಟ್ ಅವಿದ್ಯಾವಂತರೂ ಸಹ ವಿದ್ಯಾವಂತರಾಗಿಲ್ಲ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಮಗೆ ನಾವು ಅಂಕಿ ಅಂಶಗಳನ್ನೆಲ್ಲಾ ಒದಗಿಸಿದ್ದೇವೆ. ಅದನ್ನು ತಾವೇ ಲೆಕ್ಕ ಹಾಕಿ ನೋಡಿಕೊಳ್ಳಬಹುದು

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಈ ವಯಸ್ಕರ ವಿದ್ಯಾಭ್ಯಾಸ, ಈ ಸಂಸ್ಕೃತಿ ಪ್ರಚಾರ, ಸೇವಾದಳ ಇತ್ಯಾದಿಗಳ ಚಟುವಟಿಕೆಗಳೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಗಿರುವುದರಿಂದ ಇವುಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಆರ್ಗನೈಜೇಷನ್ ಮಾಡಿ ಆ ಮೂಲಕ ಕೆಲಸ ಮಾಡುವಂತೆ ಏರ್ಪಾಡು ಮಾಡುವುದು ಒಳ್ಳೆಯದಲ್ಲವೆ ?

Mr. SPEAKER.—It does not arise out of this question.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಪ್ರಶ್ನೆಯೂ ಉದ್ಭವವಾಗುತ್ತದೆ. ಈ ಸಂಸ್ಕೃತಿ ಪ್ರಚಾರ, ಸೇವಾದಳ ಮತ್ತು ಅಡಲ್ಟ್ ಲಿಟ್ರಸಿ ಇವುಗಳೆಲ್ಲಾ ಸ್ವಲ್ಪ ಹೆಚ್ಚು ಕಡಮೆ ಒಂದೇ ರೀತಿಯಾಗಿ ಕೆಲಸಮಾಡುತ್ತಿರುವುದರಿಂದ ಈ ದಿವನ ಇವು ಬೇರೆ ಬೇರೆಯಾಗಿರುವುದರಿಂದ ಖರ್ಚುವೆಚ್ಚಗಳು ವಿಶೇಷವಾಗಿ ಆಗುತ್ತಿವೆ. ಈ ಖರ್ಚುವೆಚ್ಚಗಳನ್ನು ಕಡಮೆ ಮಾಡತಕ್ಕ ದೃಷ್ಟಿಯಿಂದ ಲಾದರೂ ಹಾಗೆ ಮಾಡಬೇಡವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು. ಈಗ ಎಲ್ಲಾ ಬಾಬುಗಳನ್ನೂ ಒಬ್ಬರ ಆಡಳಿತಕ್ಕೆ ಒಳಪಡಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ತಾವೀಗ ಅಪೆಂಡಿಕ್ಸ್‌ನಲ್ಲಿ 3,833 ರೂಪಾಯಿಗಳನ್ನು ಕಮಿಟಿ ಮೀಟಿಂಗ್‌ಗಳಿಗಾಗಿ ಖರ್ಚಾಗಿವೆಯೆ ಹೇಳಿದ್ದೀರಿ. ಯಾವ ಕಮಿಟಿಗಳು ನಡೆದಿವೆ ? ಯಾರಾರಿಗೆ ಹಾಗೆ ಟಿ. ಎ. ಮತ್ತು ಡಿ. ಎ. ಗಳನ್ನು ಕೊಟ್ಟಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸೆಂಟ್ರಲ್ ಸಮಿತಿ ಮತ್ತು ಡಿಸ್ಟ್ರಿಕ್ಟ್ ಸಮಿತಿಗಳು ಮೀಟಾಗಿರುತ್ತವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಆ ಡಿಸ್ಟ್ರಿಕ್ಟ್ ಸಮಿತಿಗಳಿಗೆ ಟಿ. ಎ., ಡಿ. ಎ. ಗಳನ್ನು ಕೊಡುವುದಿಲ್ಲ ಎನ್ನುವುದು ತಮಗೆ ಗೊತ್ತಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಸಂಸ್ಥೆಗೆ ತಾವು ಎಷ್ಟು ವ್ಯಾನುಗಳನ್ನು ಕೊಟ್ಟಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಪ್ರಶ್ನೆಗಾಗಲೇ ಜವಾಬನ್ನು ಕೊಟ್ಟಿದ್ದೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅವುಗಳನ್ನು ಈಗ ಯಾರು ಉಪಯೋಗಿಸುತ್ತಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಇಲಾಖೆಯವರೂ ಮತ್ತು ಸಂಬಂಧಪಟ್ಟ ಸಮಿತಿಯವರೂ ಉಪಯೋಗಿಸುತ್ತಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ತಾವು ಇಲ್ಲಿ ಕೊಟ್ಟಿರತಕ್ಕಂಥ ಪರಿಶಿಷ್ಟದಲ್ಲಿ ನೋಡಿದರೆ ಈಗ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಬೇಕೆಂದಿದ್ದ ಮೊಬಲಗಿನಲ್ಲಿ ಮುಕ್ಕಾಲು ಮೂರು ವೀಸೆ ಪಾಲಿನಷ್ಟು ಹಣವೆಲ್ಲಾ ಈ ಸಿಬ್ಬಂದಿ ಖರ್ಚಿಗಾಗಿಯೇ ಹೋಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಸಂಸ್ಥೆಯ ಸ್ವಭಾವವೇ ಹಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಬಾಬನ್ನು ವಿದ್ಯಾ ಇಲಾಖೆಗೆ ವಹಿಸಿದರೆ ಈ ಖರ್ಚನ್ನೆಲ್ಲಾ ಉಳಿಸಬಹುದು ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

Mr. SPEAKER.—That question has been answered. The matter is under the consideration of Government and they may take suitable measures on it.

ಶ್ರೀ ಜಿ. ದುಗ್ಗಪ್ಪ.—1949-50 ರಿಂದ 1953-54ರ ತನಕ ಖರ್ಚಾಗಿರತಕ್ಕಂಥ ಈ ದುಡ್ಡಿನ ಪಟ್ಟಿಯನ್ನು ಪರಿಶಿಷ್ಟದಲ್ಲಿ ಕೊಟ್ಟಿದ್ದಾರೆ. ಈ ದುಡ್ಡನ್ನೆಲ್ಲಾ ಚಿಕ್ಕ ಮಕ್ಕಳ—ಪ್ರೌಢಮರಿ ವಿದ್ಯಾಭ್ಯಾಸಕ್ಕೇ ಉಪಯೋಗಿಸಿದ್ದರೆ ಈಗೇನು ಜನ ವಿದ್ಯಾವಂತರಾಗುತ್ತಿದಾರೋ ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವಂತರಾಗುತ್ತಿದ್ದರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಚಿಕ್ಕವರೂ, ದೊಡ್ಡವರೂ ಇಬ್ಬರೂ ವಿದ್ಯಾವಂತರಾಗಬೇಕು.

ಶ್ರೀ ಜಿ. ದುಗ್ಗಪ್ಪ.—ತಾವು ಈ ಮೊಬಲಗನ್ನು ಚಿಕ್ಕ ವಯಸ್ಸಿನ ಮಕ್ಕಳಿಗೇನೆ ಖರ್ಚು ಮಾಡಿದ್ದರೆ ಕಡಮೆ ಖರ್ಚಿನಲ್ಲಿ ಹೆಚ್ಚು ಜನ ವಿದ್ಯಾವಂತರಾಗುತ್ತಿದ್ದರಲ್ಲವೇ ಮತ್ತು ಈ ರೀತಿ ವಯಸ್ಕರಿಗೆ ಹಣ ಖರ್ಚು ಮಾಡತಕ್ಕದ್ದಾದರೂ ತಪ್ಪುತ್ತಿರಲಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎರಡು ಕಡೆಯಿಂದಲೂ ಈ ವಿದ್ಯಾಭಿವೃದ್ಧಿಗೆ ಗಮನ ಕೊಡಬೇಕೆಂಬುದು ಸರ್ಕಾರದವರ ಅಭಿಪ್ರಾಯ.